**ಸಾಕ್ಷಿಯನ್ನು ದಿಃ17.02.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ಪ್ರತಿವಾದಿ ಮಹಾದೇವ್ಮ ನನ್ನ ತಂಗಿ. ಸಾಕ್ಷಿ ಗಣೇಶ ನನ್ನ ತಂಗಿ ಮಗ. ಸದರಿ ಗಣೇಶ ರವರು ಕಟ್ಲೂರು ಗ್ರಾಮದಲ್ಲಿ ವಾಸ ಎಂದರೆ, ಇಲ್ಲ ತಿರುಮಲಾಪುರದಲ್ಲಿ ವಾಸವಿದ್ದಾರೆ.

2. ನಮ್ಮ ಹಾಗೂ ಪುಟ್ಟತಾಯಿ ಜಮೀನು 3 ಹೊಲ ದಾಟಿದ ಮೇಲೆ ಇದೆ.

3. ನನ್ನ ಜಮೀನಿನ ಚಕ್ಕುಬಂದಿ ಗೊತ್ತಿಲ್ಲ. ನಿಮ್ಮ ಜಮೀನಿಗೆ ಯಾವ ಕಡೆ ರಸ್ತೆ ಇದೆ ಎಂದರೆ ನಮ್ಮ ಜಮೀನಿಗೆ ರಸ್ತೆ ಇಲ್ಲ. ನಮ್ಮ ಜಮೀನಿಗೆ ರಸ್ತೆ ಇಲ್ಲ ಎಂದು ಕೇಸ್ ಹಾಕಿಲ್ಲ.

4. ಪುಟ್ಟತಾಯಮ್ಮ ಸ.ನಂ.17 ಕ್ಕೆ ಕೇಸ್ ಹಾಕಿದ್ದಾರೆ. ಅದರ ಚಕ್ಕುಬಂದಿ ಗೊತ್ತು. ಅವರಿಗೆ 1 ಎಕರೆ 22 ಗುಂಟೆ ಜಮೀನು ಇದೆ. ಆ ಬಗ್ಗೆ ದಾಖಲೆ ನೋಡಿಲ್ಲ.

5. ಪುಟ್ಟತಾಯಮ್ಮನಿಗೆ 1 ಎಕರೆ 20 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಅವರು ವ್ಯವಸಾಯ ಮಾಡಿಕೊಂಡಿದ್ದಾರೆ ಎಂದರೆ ಸರಿ. ಅವರ ಜಮೀನಿನ ಪೂರ್ವಕ್ಕೆಃ ರುದ್ರಪ್ಪ, ಪಶ್ಚಿಮಕ್ಕೆ ಹಾಗೂ ಉತ್ತರಕ್ಕೆ ರಸ್ತೆ ಹಾಗೂ ದಕ್ಷಿಣಕ್ಕೆಃ ಸೋಮಶೇಖರ ರವರ ಜಮೀನು ಎಂದರೆ ಸರಿ.

6. ಪುಟ್ಟತಾಯಮ್ಮನವರ ಜಮೀನಿನ ಪಕ್ಕ ತಾಗಿಕೊಂಡಂತೆ ನಿಮಗೆ ಅಥವಾ ಪ್ರತಿವಾದಿಗೆ ಜಮೀನು ಇಲ್ಲ ಎಂದರೆ ಸರಿ.

7. ಖರಾಬು ಜಾಗ ಇರುವ ಬಗ್ಗೆ ದಾಖಲಾತಿ ನೋಡಿದ್ದೇನೆ. ಸರ್ವೆ ಮಾಡಿಸಿ ನೋಡಿದ್ದೇನೆ. ಸರ್ವೆಯನ್ನು 2 ತಿಂಗಳಲ್ಲಿ ಮಾಡಿದ್ದರು. ಆಗ ನಮ್ಮ ಜಮೀನು ಸಹ ಅಳತೆ ಮಾಡಿದ್ದಾರೆ. ಅದರ ವರದಿಯನ್ನು ನಾನು ತಂದಿಲ್ಲ.

8. ಪುಟ್ಟತಾಯಮ್ಮ ಈ ದಾವೆಯನ್ನು ಪ್ರತಿವಾದಿ ರಸ್ತೆ ಬಿಡುವುದಿಲ್ಲ ಎಂದು ಹಾಕಿದ್ದಾರೆ. ಪುಟ್ಟತಾಯಮ್ಮನಿಗೆ ಎರಡೂ ಕಡೆ ಇರುವ ರಸ್ತೆ 40 ವರ್ಷದಿಂದ ಇದೆ. ಪ್ರತಿವಾದಿ ಅದೇ ರಸ್ತೆಯಲ್ಲಿ ತಿರುಗಾಡುತ್ತಾರೆ ಎಂದರೆ, ಎಲ್ಲರೂ ಓಡಾಡುತ್ತಾರೆ.

9. ದಾವಾ ಜಮೀನು ವಾದಿಗೆ ಸಾಗುವಳಿ ಮೂಲಕ ಬಂದಿದೆ ಎಂದರೆ ಸರಿ.

10. 5 ಗುಂಟೆ ಖರಾಬು ಇರುವ ಬಗ್ಗೆ ಪಹಣಿ ನೋಡಿದ್ದೀರಾ ಎಂದರೆ ನೋಡಿದ್ದೇನೆ, ಎಲ್ಲರ ಜಮೀನಲ್ಲೂ ಸ್ವಲ್ಪ ಸ್ವಲ್ಪ ಖರಾಬು ಇದೆ.

11. ವಾದಿಗೆ ಗಂಡು ಮಕ್ಕಳು ಇಲ್ಲ ಎಂದರೆ, ಮೃತರಾಗಿದ್ದಾರೆ.

12. ವಾದಿ ಜಮೀನಿಗೆ ನಿಮ್ಮ ತಂಗಿ ಪ್ರತಿವಾದಿ ಅವರಿಗೆ ರಸ್ತೆ ಇಲ್ಲದಿದ್ದರೂ ತೊಂದರೆ ಕೊಡುತ್ತಿದ್ದರು ಎಂದರೆ, ಮೊದಲಿನಿಂದಲೂ ರಸ್ತೆ ಇತ್ತು.

13. ಪ್ರತಿವಾದಿ ಸಹ ಒಂದು ದಾವೆ ಹಾಕಿದ್ದಾರೆ ಎಂದರೆ ಸರಿ. ಅವರ ಜಮೀನಿಗೆ ಯಾವ ಚಕ್ಕುಬಂದಿ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

14. ನೀವು, ನಿಮ್ಮ ತಂಗಿ ಹಾಗೂ ಅವರ ಮಗ ಸೇರಿ ವಾದಿಯ ಜಮೀನು ಲಪಟಾಯಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

15. ದಾವಾ ಆಸ್ತಿಯ ವಿಚಾರ ನಿಮಗೆ ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ